

# ರೋಗಗಳಿಗೆ ರಾಜುಬಾಣ

**ಹೀಗೊಬ್ಬ ಐಎಎಸ್ ಡಾಕ್ಟರ್**

ಇವರ ಹೆಸರು ಎಸ್.ಎಂ. ರಾಜು: ವೃತ್ತಿ: ಬಿಹಾರ ಸರ್ಕಾರದಲ್ಲಿ ಹಿರಿಯ ಐಎಎಸ್ ಅಧಿಕಾರಿ ಪ್ರವೃತ್ತಿ: ವೈದಿಕ ಪದ್ಧತಿ ಆಧರಿಸಿದ ಆಯುರ್ವೇದ ವೈದ್ಯಕೀಯ ಸಂಶೋಧನೆ. ಹುಟ್ಟೂರು ಚಿಕ್ಕಬಳ್ಳಾಪುರ ಜಿಲ್ಲೆ ಶಿಡ್ಲಘಟ್ಟದ ಮಳ್ಳೂರು.

ತಂದೆ ಹಾಗೂ ಮಗನಿಗೆ ಎದುರಾದ ಮಾರಣಾಂತಿಕ ಕಾಯಿಲೆಯನ್ನು ಗುಣಪಡಿಸುವ ಸಲುವಾಗಿ ಪರ್ಯಾಯ ಔಷಧಿ ಸಂಶೋಧನೆಯನ್ನು ಕೈಗೆತ್ತಿಕೊಂಡು ಅದನ್ನು ಹಠಯೋಗಿಯಂತೆ ಚಿಕಿತ್ಸಾ ಮೂಲವನ್ನು ಅರಗಿಸಿಕೊಂಡು ಈಗ "ನಾನಾ ಕಾಯಿಲೆಗಳಿಗೆ ವ್ಯತಿರಿಕ್ತ ಪರಿಣಾಮವಿಲ್ಲದ ಆಯುರ್ವೇದ ಔಷಧಿಗಳನ್ನು ಕಂಡುಹಿಡಿದಿರುವ ಧೀಮಂತ. ಇವರ ಔಷಧಿಗಳ ಮೂಲಕ ಗುಣಮುಖರಾದವರು ಅದೆಷ್ಟೋ ಮಂದಿ. ಕ್ಯಾನ್ಸರ್ ಒಂದನ್ನು ಬಿಟ್ಟು ಉಳಿದ ಎಲ್ಲ ಕಾಯಿಲೆಗಳಿಗೆ ಇವರ ಬಳಿ ಔಷಧಿ ಉಂಟು. ಇವರ ಔಷಧಿಗಳಿಗೆ ಕೇಂದ್ರ ಸರ್ಕಾರದ ಮಾನ್ಯತೆಯೂ ಸಿಕ್ಕಿದೆ. ಮಾರುಕಟ್ಟೆ ಜಾಲ ಇನ್ನೂ ಸೃಷ್ಟಿಯಾಗಬೇಕಷ್ಟೆ. ಮಧುಮೇಹ, ರಕ್ತದೊತ್ತಡ, ಸಂಧಿವಾತ, ಅರೆತಲೆನೋವು, ವಾಯುಪ್ರಕೋಪ ಮೊದಲಾದ ಕಾಯಿಲೆಗಳಿಗೆ ಅಭಿವೃದ್ಧಿಪಡಿಸಿರುವ ಔಷಧಿಗಳು ಲಭ್ಯ. ಇವರ ಸಂಶೋಧನೆ ಹಾಗೂ ಚಿಕಿತ್ಸಾ ಮಾರ್ಗಗಳ ಬಗ್ಗೆ ಪೂರ್ಣ ವಿವರ ಪುಟ 8.